**ಅಸಲು ದಾವೆ ಸಂಖ್ಯೆ.422/2014**
ಪಿ.ಡಬ್ಲ್ಯು:2

**ದಿನಾಂಕಃ09.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಪರ ಶ್ರೀ. ಕೆ.ಎಂ.ಜೆ ವಕೀಲರಿಂದಃ-**

ನಾನು ಅಂತರಘಟ್ಟೆಯಲ್ಲಿ ವಾಸವಾಗಿರುತ್ತೇನೆಂದರೆ ಸರಿ. ನನಗೆ ದಾವಾ ಸ್ವತ್ತಿನ ಪೂರ್ವ ಭಾಗದಲ್ಲಿ ಆಸ್ತಿ ಇರುತ್ತದೆ. ನನಗೆ ಸೇರಿದ ಆಸ್ತಿ ಪೂರ್ವ ಪಶ್ಚಿಮ 36 ಅಡಿ, ಉತ್ತರ ದಕ್ಷಿಣ 50 ಅಡಿ ಇರುತ್ತದೆ. ಸದರಿ ಆಸ್ತಿ ದಾವಾ ಸ್ವತ್ತಿನ ಪೂರ್ವ ಭಾಗದಲ್ಲಿ ಒಂದು ಮನೆ ಆದ ನಂತರ ಬರುತ್ತದೆ. ನನಗೆ ಸದರಿ ಆಸ್ತಿ ಸರ್ಕಾರದಿಂದ ಮಂಜೂರಾಗಿರುತ್ತದೆ.

2. ವಾದಿ ದಾವಾ ಆಸ್ತಿಯನ್ನು ಸಾಕಮ್ಮ ಎಂಬುವವರಿಂದ ಖರೀದಿ ಮಾಡಿರುತ್ತಾರೆ. ಸಾಕಮ್ಮನ ಗಂಡನ ಹೆಸರು ನಾಗರಾಜಪ್ಪ. ಸಾಕಮ್ಮನಿಗೆ ಸದರಿ ಆಸ್ತಿ ಸರ್ಕಾರದಿಂದ ಸುಮಾರು 40 ವರ್ಷಗಳ ಹಿಂದೆ ಪೂರ್ವ ಪಶ್ಚಿಮ 20 ಉತ್ತರ ದಕ್ಷಿಣ 40 ಅಡಿ ಮಂಜೂರಾಗಿರುತ್ತದೆ. ವಾದಿ ಸಾಕಮ್ಮರವರಿಂದ ಮನೆಯನ್ನು ಖರೀದಿ ಮಾಡಿರುತ್ತಾರೆ. ಸಾಕಮ್ಮರವರು ಮಾರಾಟ ಮಾಡಿದ ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಾಗಿರುವುದಿಲ್ಲ.

3. ಪ್ರತಿವಾದಿಯ ಮಾವ ನಾರಾಯಣ್ ರಾವ್ ರವರಿಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿ. ನಾರಾಯಣ್ ರಾವ್ ರವರಿಗೆ ಮಂಜೂರಾದ ಆಸ್ತಿಯಲ್ಲಿ ಅವರು ಸ್ವಾಧೀನ ಇದ್ದು ಅವರ ನಂತರ ಅವರ ಹೆಂಡತಿ ಸ್ವಾಧೀನ ಇರುತ್ತಾರೆ ಎಂದರೆ ಸರಿ. ಪ್ರತಿವಾದಿ ನಾರಾಯಣ್ ರಾವ್ ರವರ ಹೆಂಡತಿಯಿಂದ ಪೂರ್ವ ಪಶ್ಚಿಮ 40 ಮತ್ತು ಉತ್ತರ ದಕ್ಷಿಣ 40 ಅಡಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ ಸ್ಟೇರ್ ಕೇಸ್ ನ್ನು ಕಟ್ಟಿದ್ದಾರೆ ಎಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಸ್ಟೇರ್ ಕೇಸ್ ನ್ನು ಪ್ರತಿವಾದಿ ಸುಮಾರು 12-13 ವರ್ಷಗಳ ಹಿಂದೆ ಕಟ್ಟಿರುತ್ತಾರೆ. ಪ್ರತಿವಾದಿ ತನಗೆ ಸೇರಿದ ಆಸ್ತಿಯಲ್ಲಿ ಮಾತ್ರ ಕಟ್ಟಡ ಸ್ಟೇರ್ ಕೇಸ್ ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿ ಮತ್ತು ಪ್ರತಿವಾದಿಗಳ ಆಸ್ತಿಯನ್ನು ಅಳತೆ ಮಾಡಿರುವುದಿಲ್ಲ. ವಾದಿ ಪ್ರತಿವಾದಿಯ ಆಸ್ತಿಯನ್ನು ಒತ್ತುವರಿ ಮಾಡಿ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಯ ಆಸ್ತಿಯನ್ನು ಒತ್ತುವರಿ ಮಾಡಿ

ಸ್ಟೇರ್ ಕೇಸ್ ನಿರ್ಮಿಸಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.